ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote-pa.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./03/2017–18

ದಿನಾಂಕ: 20.03.2019

## "ತಾತ್ಕಾಲಿಕ ವಿನ್ಯಾಸ ಅನುಮೋದನಾ ಪತ್ರ"

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಬಾಗಲೂರು ಗ್ರಾಮದ ಸ.ನಂ. 31/7 ರಲ್ಲಿನ 04 ಎಕರೆ 15 (01 ಗುಂಟೆ 'ಎ' ಖರಾಬನ್ನು ಸೇರಿಸಿ) ಗುಂಟೆ, ಸ.ನಂ. 31/8 ರಲ್ಲಿನ 03 ಎಕರೆ 36 (01 ಗುಂಟೆ 'ಎ' ಖರಾಬನ್ನು ಸೇರಿಸಿ) ಗುಂಟೆ, ಸ.ನಂ. 31/11 ರಲ್ಲಿನ 01 ಎಕರೆ 01 ಗುಂಟೆ ಮತ್ತು ಸ.ನಂ. 35 ರಲ್ಲಿನ 04 ಎಕರೆ 25 (01 ಗುಂಟೆ 'ಎ' ಖರಾಬನ್ನು ಸೇರಿಸಿ) ಗುಂಟೆ ಒಟ್ಟು 13 ಎಕರೆ 37 ಗುಂಟೆ (04 1/2 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ನಿರ್ದೇಶಕರು, ಶ್ರೀ ಆರ್. ಮಂಜುನಾಥ್ ಬಿನ್ ರಾಮಕೃಷ್ಣಪ್ಪ ಮತ್ತು ಶ್ರೀ ಪ್ರಸನ್ನಮೂರ್ತಿ ಬಿನ್ ಬಿ.ಟಿ. ಕೃಷ್ಣಚಾರ್, ಮೆ|| ಹಿತೈಷಿ ಪ್ರಾಪರ್ಟೀಸ್ ಪ್ರೈ ಲಿ., ಕೇರಾಫ್ ಐ.ಎಫ್.ಬಿ. ಆಟೋಮೋಟಿವ್ ಪ್ರೈ ಲಿ., ರವರುಗಳು ಕೋರಿರುವ ಬಗ್ಗೆ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:**
1. ಅರ್ಜಿದಾರರ ಮನವಿ ಪತ್ರ ದಿನಾಂಕ: 03.05.2017.
2. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಗಳ ಭೂ ಪರಿವರ್ತನಾ ಆದೇಶದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎ.ಎಲ್.ಎನ್. (ಹೊ.ಸೂ). ಎಸ್.ಆರ್/ 52/2014–15, ದಿ: 06.08.2015 ಮತ್ತು ನವೀಕೃತ ಆದೇಶ ಸಂಖ್ಯೆ:ಎ.ಎಲ್.ಎನ್. (ಹೊ.ಸೂ). ಎಸ್.ಆರ್/35/2016–17, ದಿ: 20.05.2017 (ಸ.ನಂ. 31/7 ರಲ್ಲಿ 04–15 (01 ಗುಂಟೆ 'ಎ' ಖರಾಬು ಸೇರಿ) ಸ.ನಂ. 31/8 ರಲ್ಲಿ 03–36 (01 ಗುಂಟೆ 'ಎ' ಖರಾಬು ಸೇರಿ), ಸ.ನಂ.31/11 ರಲ್ಲಿ 01–01) ಮತ್ತು ಎ.ಎಲ್.ಎನ್. (ಹೊ.ಸೂ). ಎಸ್.ಆರ್/22 /2015–16, ದಿ: 16.05.2016 ಸ.ನಂ. 35 ರಲ್ಲಿ 04–25 (01 ಗುಂಟೆ 'ಎ' ಖರಾಬು ಸೇರಿ) ಒಟ್ಟು 13ಎ–37ಗುಂ.
3. ದಿನಾಂಕ: 22.07.2017 ರಂದು ಪ್ರಾಧಿಕಾರದ 70 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 15 ರ ನಿರ್ಣಯ.
4. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 09.08.2017 ರಂದು ಅರ್ಜಿದಾರರಿಗೆ ಬರೆದಿರುವ ಪತ್ರ.
5. ಅರ್ಜಿದಾರರು ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಬಗ್ಗೆ ದಿನಾಂಕ: 11/14.08.2017 ರ ಮನವಿಯೊಂದಿಗೆ, ಆಕ್ಸಿಸ್‌ಬ್ಯಾಂಕ್, ವೈಟ್ ಫೀಲ್ಡ್, ಬೆಂಗಳೂರು (ಕೆಟಿ) 514, ಡಿ. ಡಿ. ನಂ. 040851, ಡಿ.ಡಿ. ದಿನಾಂಕ: 11.08.2017, ರೂ. 14,22,200/– ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಮಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಸಂ: PCB/231/CNP/171/H-425, ದಿನಾಂಕ: 08.08.2017.
6. ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ: 26.09.2017 ರಂದು ಅರ್ಜಿದಾರರಿಗೆ ಬರೆದಿರುವ ಪತ್ರ.
7. ಅರ್ಜಿದಾರರ ಮನವಿ ಪತ್ರ ದಿನಾಂಕ: 05.01.2019.
8. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 11.03.2019 ರಂದು ಕಂಬಳೀಪುರ ಗ್ರಾಮಪಂಚಾಯಿತಿ ಹಾಗೂ ಉಪನೋಂದಣಾಧಿಕಾರಿಗಳು, ಹೊಸಕೋಟೆ ರವರುಗಳಿಗೆ ಬರೆದಿರುವ ಪತ್ರ.

9. ಅರ್ಜಿದಾರರು ರಸ್ತೆ ಮತ್ತು ಉದ್ಯಾನವನ ಹಾಗೂ ಬಯಲು ಜಾಗ ಪ್ರದೇಶವನ್ನು ಪರಿತ್ಯಾಜನಾ ಪತ್ರದ ಮೂಲಕ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಂಬಳೀಪುರ ಗ್ರಾಮಪಂಚಾಯಿತಿ, ಹೊಸಕೋಟೆ ತಾಲ್ಲೂಕು ರವರಿಗೆ ಹಸ್ತಾಂತರಿಸಿರುವ ಕುರಿತು ಉಪನೋಂದಣಾಧಿಕಾರಿಗಳು, ಹೊಸಕೋಟೆ ರವರ 1ನೇ ಪುಸ್ತಕದ ದಸ್ತಾವೇಜು ನಂಬರ್ HSK-1-12358-2018-19 ಆಗಿ ಸಿ.ಡಿ. ನಂಬರ್ HSKD 715 ನೇ ದ್ದರಲ್ಲಿ ದಿನಾಂಕ: 15.03.2019 ರಂದು ನೋಂದಾಯಿಸಿರುವ ಪತ್ರವನ್ನು ಕಂಬಳೀಪುರ ಗ್ರಾಮಪಂಚಾಯಿತಿ ರವರ ಪತ್ರ ಸಂಖ್ಯೆ: ಕಂ.ಗ್ರಾ.ಪಂ/ಪರಿತ್ಯಜನಾ/34/2018–19, ದಿನಾಂಕ: 15.03.2019 ರಲ್ಲಿ ಸಲ್ಲಿಸಿರುವುದು.
10. ಅರ್ಜಿದಾರರು ನಾಗರೀಕ ಸೌಲಭ್ಯ (ಸಿ.ಎ) ನಿವೇಶನವನ್ನು ಪರಿತ್ಯಾಜನಾ ಪತ್ರದ ಮೂಲಕ ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವ ಕುರಿತು ಉಪನೋಂದಣಾಧಿಕಾರಿಗಳು, ಹೊಸಕೋಟೆ ರವರ 1ನೇ ಪುಸ್ತಕದ ದಸ್ತಾವೇಜು ನಂಬರ್ HSK-1-12314-2018-19 ಆಗಿ ಸಿ.ಡಿ. ನಂಬರ್HSKD714 ನೇ ದ್ದರಲ್ಲಿ ದಿನಾಂಕ: 14.03.2019 ರಂದು ನೋಂದಾಯಿಸಿರುವ ಬಗ್ಗೆ ಪತ್ರವನ್ನು ಅರ್ಜಿದಾರರು ದಿನಾಂಕ: 15.03.2019 ರಂದು ಸಲ್ಲಿಸಿರುವುದು.
11. ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಪ್ರಕಟಣೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015.

ಪ್ರಸ್ತಾವನೆ

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಮನವಿ ಪತ್ರದಲ್ಲಿ ನಿರ್ದೇಶಕರು, ಶ್ರೀ ಆರ್. ಮಂಜುನಾಥ್ ಬಿನ್ ರಾಮಕೃಷ್ಣಪ್ಪ ಮತ್ತು ಶ್ರೀ ಪ್ರಸನ್ನಮೂರ್ತಿ ಬಿನ್ ಬಿ.ಟಿ. ಕೃಷ್ಣಚಾರ್, ಮೆ॥ ಹಿತೈಷಿ ಪ್ರಾಪರ್ಟೀಸ್ ಪ್ರೈ ಲಿ., ಕೇರಾಫ್ ಐ.ಎಫ್.ಬಿ. ಆಟೋಮೋಟಿವ್ ಪ್ರೈ ಲಿ., ರವರುಗಳು ವಸತಿ ವಿನ್ಯಾಸ ನಕ್ಷೆ ಅನುಮೋದನೆ ಸಂಬಂಧ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಉಲ್ಲೇಖ (2) ರಲ್ಲಿ ಪ್ರಶ್ನಿತ ಸ.ನಂ. ಜಮೀನುಗಳಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಗಳು ತಮ್ಮ ಅಧಿಕೃತ ಜ್ಞಾಪನದಲ್ಲಿ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನಾ ಆದೇಶವನ್ನು ಹೊರಡಿಸಿರುತ್ತಾರೆ.

ಉಲ್ಲೇಖ (3) ರ ಹೊಸಕೋಟೆ ಯೋಜನಾ ಪ್ರಾಧಿಕಾರದ ದಿನಾಂಕ: 22.07.2017 ರಂದು ನಡೆದ ಪ್ರಾಧಿಕಾರದ 70 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 15 ರಲ್ಲಿ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಅಂಗೀಕರಿಸಲಾಗಿದೆ. ಸಭೆಯ ನಿರ್ಣಯದಂತೆ ಉಲ್ಲೇಖ (4) ರ ದಿನಾಂಕ: 09.08.2017 ರ ಪತ್ರದಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೆ ಸಂಬಂಧಿಸಿದಂತೆ ಶುಲ್ಕ ಪಾವತಿಸಲು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ ಪತ್ರವನ್ನು ಪಡೆದು ಸಲ್ಲಿಸಲು ಅರ್ಜಿದಾರರಿಗೆ ಸೂಚಿಸಲಾಗಿದೆ. ಅದರಂತೆ, ಅರ್ಜಿದಾರರು ಪ್ರಾಧಿಕಾರಕ್ಕೆ ಉಲ್ಲೇಖ (5) ರಲ್ಲಿ ಶುಲ್ಕವನ್ನು ಪಾವತಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (6) ರ ಈ ಪ್ರಾಧಿಕಾರದ ಪತ್ರದಲ್ಲಿ ವಲಯ ನಿಯಮಾವಳಿಗಳಿಗೆ ಅನುಗುಣವಾಗಿ ತಯಾರಿಸಿರುವ ನಕ್ಷೆಯನ್ನು ಸಲ್ಲಿಸಲು ಸೂಚಿಸಲಾಗಿದ್ದು, ಅದರಂತೆ ಉಲ್ಲೇಖ (7) ರ ಅರ್ಜಿದಾರರ ಮನವಿ ಪತ್ರದಲ್ಲಿ ಪ್ರಶ್ನಿತ ಜಮೀನನ್ನು ಹದ್ದುಬಸ್ತು ಮಾಡಿಸಿ ಸದರಿ ಸರ್ವೆ ನಕ್ಷೆಯಂತೆ ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡಲು ಕೋರಿರುತ್ತಾರೆ. ವಿನ್ಯಾಸ ನಕ್ಷೆಯನ್ನು ಈಗ ಅಂತಿಮಗೊಳಿಸಲಾಗಿದೆ.

ಉಲ್ಲೇಖ (8) ರ ದಿನಾಂಕ: 11.03.2019 ರ ಪತ್ರದಲ್ಲಿ ರಸ್ತೆ ಮತ್ತು ಉದ್ಯಾನವನ ಹಾಗೂ ಬಯಲು ಜಾಗ ಪ್ರದೇಶವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಂಬಳೀಪುರ ಗ್ರಾಮಪಂಚಾಯಿತಿ, ಹೊಸಕೋಟೆ ತಾಲ್ಲೂಕು ರವರಿಗೆ ಹಾಗೂ ನಾಗರೀಕ ಸೌಲಭ್ಯ (ಸಿ.ಎ) ನಿವೇಶನವನ್ನು ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ತಿಳಿಸಿ ಪತ್ರ ಬರೆಯಲಾಗಿರುತ್ತದೆ.

ಉಲ್ಲೇಖ (9) ರ ಪತ್ರದಲ್ಲಿ ಅರ್ಜಿದಾರರು ಉದ್ಯಾನವನ ಮತ್ತು ಬಯಲು ಜಾಗ ಹಾಗೂ ರಸ್ತೆ ಮತ್ತು ರಸ್ತೆ ಅಗಲೀಕರಣದ ಪ್ರದೇಶಗಳನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಂಬಳೀಪುರ ಗ್ರಾಮಪಂಚಾಯಿತಿ, ಹೊಸಕೋಟೆ ತಾಲ್ಲೂಕು ರವರಿಗೆ ಹಾಗೂ ಉಲ್ಲೇಖ (10) ರ ಪತ್ರದಲ್ಲಿ ನಾಗರೀಕ ಸೌಲಭ್ಯ (ಸಿ.ಎ) ನಿವೇಶನವನ್ನು ಹೊಸಕೋಟೆ ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನಾ ಪತ್ರದ ಮುಖಾಂತರ ಹಸ್ತಾಂತರಿಸಿರುವ ಕುರಿತು ನೋಂದಾಯಿತ ಪರಿತ್ಯಾಜನಾ ಪತ್ರಗಳನ್ನು ಸಲ್ಲಿಸಿರುತ್ತಾರೆ.

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote-pa.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

**ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./03/2017-18**

**ದಿನಾಂಕ: 20.03.2019**

ಹಾಗಾಗಿ, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ನಿಯಮಾನುಸಾರ ಕ್ರಮ ವಹಿಸಿ, ಈ ಹಂತದಲ್ಲಿ ಕರಡು ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿ ಪಡಿಸುವ ಸಂಬಂಧ ವಿನ್ಯಾಸವನ್ನು ಅನುಮೋದಿಸಲಾಗುತ್ತಿದ್ದು, ಅರ್ಜಿದಾರರು ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿದ ನಂತರ ಶೇ. 100 ರಷ್ಟು ನಿವೇಶನಗಳನ್ನು ನೋಂದಣಿಗೆ ಬಿಡುಗಡೆ ಮಾಡಲು ವಿನ್ಯಾಸ ನಕ್ಷೆಯನ್ನು ಪರಿಶೀಲಿಸಲಾಗಿದೆ.

ಈ ವಿನ್ಯಾಸದಲ್ಲಿ ವಸತಿಗಾಗಿ 29205.20 ಚ. ಮೀ. (ಶೇ 51.83); ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 5724.91 ಚ. ಮೀ. (ಶೇ 10.15); ನಾಗರೀಕ ಸೌಲಭ್ಯ (ಸಿ.ಎ) ನಿವೇಶನಗಳಿಗಾಗಿ 2884.10 ಚ.ಮೀ. (ಶೇ. 5.12) ಮತ್ತು ರಸ್ತೆಗಳಿಗಾಗಿ 18537.48 ಚ. ಮೀ. (ಶೇ 32.90) ವಿಸ್ತೀರ್ಣವನ್ನು ನಿಗದಿಪಡಿಸಲಾಗಿದೆ. ವಿನ್ಯಾಸದಲ್ಲಿ 9.14X9.14 ಮೀ. ಅಳತೆಯ 08 ವಸತಿ ನಿವೇಶನಗಳು; 9.14X12.19 ಮೀ. ಅಳತೆಯ 27 ವಸತಿ ನಿವೇಶನಗಳು; 9.14X15.24 ಮೀ. ಅಳತೆಯ 36 ವಸತಿ ನಿವೇಶನಗಳು ಮತ್ತು 139 ಸಂಖ್ಯೆಯ ಅನಿಯತ ನಿವೇಶನಗಳು ಸೇರಿದಂತೆ ಒಟ್ಟು 210 ವಸತಿ ನಿವೇಶನಗಳನ್ನು ಪ್ರಸ್ತಾವಿಸಲಾಗಿದ್ದು, ಸದರಿ ವಿನ್ಯಾಸವು ಅನುಮೋದಿತ ವಲಯ ನಿಯಮಾವಳಿಗನುಗುಣವಾಗಿರುತ್ತದೆ.

ಉಲ್ಲೇಖ (11) ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ, 2015 ರ ಕಲಂ (17)(2ಎ) ರಡಿಯಲ್ಲಿ (Amendment of Sec 17) ಪ್ರಸ್ತಾಪಿತ ವಸತಿ ವಿನ್ಯಾಸವನ್ನು ಸ್ಥಳದಲ್ಲಿ ಅಭಿವೃದ್ಧಿ ಪಡಿಸುವ ಸಲುವಾಗಿ ಮಾತ್ರ **(ಸದರಿ ವಸತಿ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸುವ ವರೆಗೆ ಯಾವುದೇ ನಿವೇಶನವನ್ನು ಮಾರಾಟ ಮಾಡತಕ್ಕದಲ್ಲ)** ವಿನ್ಯಾಸವನ್ನು ತಾತ್ಕಾಲಿಕವಾಗಿ ಅನುಮೋದಿಸಲು ಅವಕಾಶ ಕಲ್ಪಿಸಲಾಗಿದೆ. ಹಾಗೂ ಸದರಿ ವಸತಿ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿದ ನಂತರ ಸಂಬಂಧಿಸಿದ ವಿವಿಧ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವ ಹಾಗೂ ಅಂತಿಮವಾಗಿ ಅನುಮೋದಿಸಿಕೊಳ್ಳುವ ನಿಬಂಧನೆಗೊಳಪಟ್ಟಿರುತ್ತದೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಹೊ.ಯೋ.ಪ್ರಾ/ಎಲ್.ಎ.ಓ/03/2017-18, ದಿನಾಂಕ : 20.03.2019**

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ, ಬಾಗಲೂರು ಗ್ರಾಮದ ಸ.ನಂ. 31/7 ರಲ್ಲಿನ 04 ಎಕರೆ 15 (01 ಗುಂಟೆ 'ಎ' ಖರಾಬನ್ನು ಸೇರಿಸಿ) ಗುಂಟೆ, ಸ.ನಂ. 31/8 ರಲ್ಲಿನ 03 ಎಕರೆ 36 (01 ಗುಂಟೆ 'ಎ' ಖರಾಬನ್ನು ಸೇರಿಸಿ) ಗುಂಟೆ, ಸ.ನಂ. 31/11 ರಲ್ಲಿನ 01 ಎಕರೆ 01 ಗುಂಟೆ ಮತ್ತು ಸ.ನಂ. 35 ರಲ್ಲಿನ 04 ಎಕರೆ 25 (01 ಗುಂಟೆ 'ಎ' ಖರಾಬನ್ನು ಸೇರಿಸಿ) ಗುಂಟೆ ಒಟ್ಟು 13 ಎಕರೆ 37 ಗುಂಟೆ (04 1/2 ಗುಂಟೆ 'ಬಿ' ಖರಾಬನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನುಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ, 2015 ರ ಕಲಂ (17) (2ಎ) [Amendment of Sec 17 sub sec 1 & 2)] ರನ್ವಯ ವಸತಿ ಉದ್ದೇಶದ ವಿನ್ಯಾಸವನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಗಡಿ ನಿರ್ಧಾರ ಮತ್ತು ಮೂಲ ಸೌಕರ್ಯಗಳನ್ನು ಸ್ಥಳದಲ್ಲಿ ಅಭಿವೃದ್ಧಿ ಪಡಿಸುವ ಸಲುವಾಗಿ ಕಾರ್ಯರೂಪಕ್ಕೆ ತರಲು ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

**ಷರತ್ತುಗಳು:**

1. ಈಗ ನೀಡಿರುವ ತಾತ್ಕಾಲಿಕ ಕರಡು ವಸತಿ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಅಂದರೆ ದಿನಾಂಕ: 20.03.2019 ರಿಂದ ದಿನಾಂಕ: 19.03.2021 ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಈ ವಿನ್ಯಾಸದಲ್ಲಿ ತೋರಿಸಿರುವಂತೆ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ / ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮೇಲ್ವಿಚಾರಣೆಯೊಂದಿಗೆ ಅಭಿವೃದ್ಧಿಪಡಿಸಿ, ಡಾಂಬರೀಕರಣ ಹಾಗೂ ಬಾಕ್ಸ್ ಡ್ರೈನೇಜ್ ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು. ಉದ್ಯಾನವನದ ಅಭಿವೃದ್ಧಿ ಕಾರ್ಯಗಳನ್ನು ತೋಟಗಾರಿಕಾ ಇಲಾಖೆಯ ಮೇಲ್ವಿಚಾರಣೆಯೊಂದಿಗೆ ನಿರ್ವಹಿಸತಕ್ಕದ್ದು. ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಯ ಮೇಲ್ವಿಚಾರಣೆಯೊಂದಿಗೆ ಹಾಗೂ ವಿದ್ಯುತ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬೆಸ್ಕಾಂ ಇಲಾಖೆಯನ್ನು ಸಂಪರ್ಕಿಸಿ ಅವರ ಮೇಲ್ವಿಚಾರಣೆಯೊಂದಿಗೆ ತಯಾರಿಸಿದ ಅಂದಾಜುಪಟ್ಟಿ ಮತ್ತು ಅವರ ಸಲಹೆ ಮತ್ತು ಮಾರ್ಗಸೂಚಿಗಳಂತೆ ಕಾಮಗಾರಿಗಳನ್ನು ಈ ಅನುಮೋದನೆ ದಿನಾಂಕದಿಂದ ಎರಡು (2) ವರ್ಷಗಳೊಳಗಾಗಿ ನಿರ್ವಹಿಸಿ ಪೂರ್ಣಗೊಳಿಸತಕ್ಕದ್ದು.
3. ತಾತ್ಕಾಲಿಕ ಕರಡು ಅನುಮೋದಿತ ರೂಪರೇಖಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ. ವಿನ್ಯಾಸವನ್ನು ಜಮೀನಿನಲ್ಲಿ ಅಭಿವೃದ್ಧಿಪಡಿಸುವ ಸಂಬಂಧ ವಿನ್ಯಾಸದಲ್ಲಿ ಎಲ್ಲಾ ಸಿವಿಲ್ ಕಾಮಗಾರಿಗಳು ಅಂದರೆ ರಸ್ತೆ, ಸಿ.ಡಿ. ವರ್ಕ್ಸ್ ಹಾಗೂ ಚರಂಡಿ ಕೆಲಸಗಳನ್ನು ಪೂರ್ಣಗೊಳಿಸಿ, ಉದ್ಯಾನವನ ಮತ್ತು ಬಯಲು ಜಾಗದ ನಿವೇಶನಗಳನ್ನು ಸ್ಥಳದಲ್ಲಿ ಗುರ್ತಿಸಿದ ನಂತರ ಹಾಗೂ ಎಲ್ಲಾ ನಿರಾಕ್ಷೇಪಣಾ ಪತ್ರಗಳೊಂದಿಗೆ ವಿನ್ಯಾಸದ ನಿವೇಶನಗಳನ್ನು **(210 ಸಂಖ್ಯೆ ನಿವೇಶನಗಳು)** ಬಿಡುಗಡೆ ಮಾಡಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.
4. ತಾತ್ಕಾಲಿಕ ಕರಡು ಅನುಮೋದಿತ ರೂಪರೇಖಾ ನಕ್ಷೆಯಂತೆ ವಿನ್ಯಾಸವನ್ನು ಜಮೀನಿನಲ್ಲಿ ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಿದ ನಂತರವೇ ಅಂದರೆ ಅಗತ್ಯ ಮೂಲಭೂತ ಸೌಕರ್ಯಗಳಾದ ರಸ್ತೆಗಳ ಡಾಂಬರೀಕರಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸರಬರಾಜು, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ಪೂರ್ಣಗೊಳಿಸಿದ ನಂತರ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ / ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ತೋಟಗಾರಿಕೆ ಇಲಾಖೆ, ಬೆಂಗಳೂರು ವಿದ್ಯುತ್ ಸರಬರಾಜು ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯಿಂದ ಕಾಮಗಾರಿ ಸಮರ್ಪಕವಾಗಿ ನಿರ್ವಹಿಸಿ ಪೂರ್ಣಗೊಳಿಸಿರುವ ಬಗ್ಗೆ ಮುಕ್ತಾಯ ಪ್ರಮಾಣ ಪತ್ರ ಪಡೆದು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿದಲ್ಲಿ, ಸದರಿ ವಿನ್ಯಾಸದಲ್ಲಿನ **(210 ಸಂಖ್ಯೆ ನಿವೇಶನಗಳು)** ಪೂರ್ಣ ಪ್ರಮಾಣದ ನಿವೇಶನಗಳನ್ನು (ಶೇ 100 ರಷ್ಟು) ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.
5. ಪ್ರಸ್ತಾಪಿತ ವಿನ್ಯಾಸದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರೈಸಿ, ಸಕ್ಷಮ ಪ್ರಾಧಿಕಾರದಿಂದ ಅಂತಿಮವಾಗಿ ನಿವೇಶನ ಬಿಡುಗಡೆ ಪಡೆದ ನಂತರವೇ ನಿವೇಶನಗಳನ್ನು ಮಾರಾಟ ಮಾಡತಕ್ಕದ್ದು ಮತ್ತು ಸ್ಥಳೀಯ ಸಂಸ್ಥೆಯಲ್ಲಿ ನಿವೇಶನಗಳ ಖಾತಾ ದಾಖಲು ಪಡೆಯತಕ್ಕದ್ದು.
6. ವಿನ್ಯಾಸ ಪ್ರದೇಶವನ್ನು ಈ ಪ್ರಾಧಿಕಾರದಿಂದ ಅನುಮೋದನೆ ನೀಡಿದ 24 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿ ಪಡಿಸಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಸ್ಥಳೀಯ ಸಂಸ್ಥೆ / ಪ್ರಾಧಿಕಾರಕ್ಕೆ ಹಸ್ತಾಂತರಿಸತಕ್ಕದ್ದು.
7. ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಪ್ರಾಧಿಕಾರವು ಅನುಮೋದಿಸಿರುವ ತಾತ್ಕಾಲಿಕ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತದೆ.
8. ಈ ಕಛೇರಿ ಪೂರ್ವಾನುಮತಿ ಇಲ್ಲದೇ ವಸತಿಯೇತರ ಉದ್ದೇಶಗಳಿಗೆ ಸದರಿ ಪ್ರದೇಶವನ್ನು ಉಪಯೋಗಿಸುವಂತಿಲ್ಲ ಮತ್ತು ನಿವೇಶನಗಳನ್ನು ಉಪ ವಿಭಾಗ ಮಾಡುವುದಾಗಲಿ ಹಾಗೂ ನಿವೇಶನಗಳ ಅಳತೆಯನ್ನು ಮಾರ್ಪಾಡು ಮಾಡುವುದಾಗಲಿ ಮಾಡಕೂಡದು. ಒಂದು ವೇಳೆ ನಿವೇಶನಗಳನ್ನು ಉಪ ವಿಭಜಿಸಬೇಕಾದಲ್ಲಿ ಅಥವಾ ಒಂದುಗೂಡಿಸಬೇಕಾಗಿದ್ದಲ್ಲಿ ವಲಯ ನಿಯಮಾವಳಿಯಂತೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯತಕ್ಕದ್ದು.
9. ವಿನ್ಯಾಸದಲ್ಲಿನ ಪ್ರತಿ ನಿವೇಶನಕ್ಕೂ ಕುಡಿಯುವ ನೀರು, ತ್ಯಾಜ್ಯ ನೀರು ವಿಲೇವಾರಿ ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸತಕ್ಕದ್ದು ಹಾಗೂ ಮಳೆ ನೀರು ಕೊಯ್ಲು ವ್ಯವಸ್ಥೆ ಕಲ್ಪಿಸುವುದು.
10. ಸದರಿ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಗೇಟ್ ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಹಾಗೂ ಸದರಿ ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯ, ರಸ್ತೆ, ಪಾದಚಾರಿ ಮಾರ್ಗ ಹಾಗೂ ಉದ್ಯಾನವನಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ, ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು ಮತ್ತು ಅಕ್ಕಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ನಿರ್ಬಂಧಿಸತಕ್ಕದ್ದಲ್ಲ.
11. ತಾತ್ಕಾಲಿಕ ಕರಡು ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನ ಮತ್ತು ಬಯಲು ಜಾಗದ ಪ್ರದೇಶಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಸಕ್ಷಮ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು. ನಾಗರೀಕ ಸೌಲಭ್ಯ ನಿವೇಶನ ಹಾಗೂ ಉದ್ಯಾನವನ ಮತ್ತು ಬಯಲು ಜಾಗಕ್ಕೆ ಅನುಮೋದಿತ ನಕ್ಷೆ ಪ್ರಕಾರ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಿ ಸಂರಕ್ಷಿಸತಕ್ಕದ್ದು.

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote-pa.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

**ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./03/2017–18**

**ದಿನಾಂಕ: 20.03.2019**

12. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸ್ಯಗಳನ್ನು ಬೆಳೆಸುವುದು.
13. **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರ ಪತ್ರ ಸಂಖ್ಯೆ: PCB/231/CNP/17/H-425, ದಿನಾಂಕ: 08.08.2017 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.**
14. **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರ ನಿರ್ದೇಶನದ ಅನುಸಾರ Direction under section 18(1)(b) of water (Prevention & Control of Pollution) Act, 1974 ರನ್ವಯ ಮಳೆ ನೀರು ಕಾಲುವೆಗಳನ್ನು ಮುಚ್ಚದಂತೆ ಕ್ರಮ ವಹಿಸಲು ಹಾಗೂ ಸದರಿ ಕಾಲುವೆಗಳಿಗೆ ಯಾವುದೇ ಕೈಗಾರಿಕೆ/ವಸತಿ/ವಾಣಿಜ್ಯ ತ್ಯಾಜ್ಯ ಹಾಗೂ ಮಲೀನ ನೀರನ್ನು ನೇರವಾಗಿ ಹರಿಸದೇ ಸೂಕ್ತ ಎಸ್.ಟಿ.ಪಿ. ಗಳನ್ನ ಅಳವಡಿಸಲು ಮತ್ತು ಮಳೆ ನೀರು ಕಾಲುವೆಗಳ ಹೂಳನ್ನು ತೆರವುಗೊಳಿಸಲು ಹಾಗೂ ಸ್ವಚ್ಛವಾಗಿಡಲು ಕ್ರಮ ವಹಿಸತಕ್ಕದ್ದು.**
15. ಸರ್ಕಾರದ ನಿರ್ದೇಶನದ ಮೇರೆಗೆ ಇನ್ನಾವುದೇ ಶುಲ್ಕಗಳನ್ನು ತುಂಬಲು ಪ್ರಾಧಿಕಾರವು ಸೂಚನೆ ನೀಡಿದಲ್ಲಿ ಅರ್ಜಿದಾರರು ಅಂತಹ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
16. ವಿನ್ಯಾಸವನ್ನು ಕಾರ್ಯಗತಗೊಳಿಸುವ ಮೊದಲು ಸ್ಥಳೀಯ ಸಂಸ್ಥೆ ಕಾಯ್ದೆಯಡಿ ಕಂಬಳೀಪುರ ಗ್ರಾಮಪಂಚಾಯಿತಿ ವತಿಯಿಂದ ಪರವಾನಗಿ ಪಡೆಯತಕ್ಕದ್ದು.
17. ಅನುಮೋದಿತ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಹಾಗೂ ವಿನ್ಯಾಸದಲ್ಲಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
18. **ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.**
19. **ಈ ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ನೀಡಿರುವ ರೆವಿನ್ಯೂ ದಾಖಲೆಗಳನ್ನು ಆಧರಿಸಿ ತಯಾರಿಸಲಾಗಿದೆ. ಈ ಜಮೀನಿನ ಮಾಲೀಕತ್ವ ಮತ್ತು ಜಮೀನಿನ ಗಡಿಗಳಿಗೆ ಸಂಬಂಧಪಟ್ಟಂತೆ ಮತ್ತು ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.**
20. ಈ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿ ನಿವೇಶನಗಳನ್ನು ಬಿಡುಗಡೆ ಪಡೆದ ನಂತರವೇ ನಿವೇಶನಗಳನ್ನು ಮಾರಾಟ ಮಾಡತಕ್ಕದ್ದು ಹಾಗೂ ಈ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ತಾತ್ಕಾಲಿಕ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
21. **ಈ ಅನುಮೋದಿತ ವಸತಿ ವಿನ್ಯಾಸವನ್ನು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು (ರೇರಾ) ರವರಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, (ರೇರಾ), ಕರ್ನಾಟಕ ರವರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.**
22. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot path) ನಿರ್ಮಿಸುವುದು.
23. ನೈಸರ್ಗಿಕವಾಗಿ ಹರಿಯುವ ನದಿ/ ಹಳ್ಳ /ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲಿನ ನೀರನ್ನು ಬಿಡಬಾರದು.
24. ಪ್ರಾಧಿಕಾರವು ವಿಧಿಸುವ ಇನ್ನಾವುದೇ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು ಹಾಗೂ ಮೇಲೆ ತಿಳಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈಗ ನೀಡಲಾದ ಅನುಮತಿಯು ತಾನೇ ತಾನಾಗಿ ರದ್ದಾಗುತ್ತದೆ.
25. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ವಿಧಿ 17(4) ರಂತೆ ಕ್ರಮಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

26. **ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಪ್ರಕಟಣೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10.09.2015 ರಲ್ಲಿ ತಿದ್ದುಪಡಿ ತಂದಿರುವ ಕಾಯ್ದೆಗೆ ಅನುಗುಣವಾಗಿ ವಿನ್ಯಾಸವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮಾತ್ರ ಈ ವಿನ್ಯಾಸವನ್ನು ಅನುಮೋದಿಸಲಾಗಿದ್ದು, ಸದರಿ ವಿನ್ಯಾಸದಲ್ಲಿನ ಯಾವುದೇ ನಿವೇಶನಗಳನ್ನು ಮಾರಾಟ ಮಾಡಲು, ಖಾತಾ ಮಾಡಲು ಅಥವಾ ಭೋಗ್ಯ / ಇತರೆ ಅಡಮಾನಗಳಿಗೆ ಅವಕಾಶವಿರುವುದಿಲ್ಲ. ಈ ವಿನ್ಯಾಸವನ್ನು ಗಡಿ ನಿರ್ಧಾರ ಮತ್ತು ಮೂಲ ಸೌಕರ್ಯಗಳನ್ನು ಸ್ಥಳದಲ್ಲಿ ಅಭಿವೃದ್ಧಿ ಪಡಿಸುವ ಸಂಬಂಧ ಮಾತ್ರ ತಾತ್ಕಾಲಿಕವಾಗಿ ಅನುಮೋದಿಸಲಾಗಿದೆ.**

27. **ಅರ್ಜಿದಾರರು ಕಛೇರಿಗೆ ಸಲ್ಲಿಸಿರುವ ದಾಖಲಾತಿಗಳನ್ವಯ ಈ ಅಂಗೀಕಾರವನ್ನು ನೀಡಲಾಗುತ್ತಿದ್ದು, ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಂತಾನೇ ರದ್ದುಗೊಳ್ಳುತ್ತದೆ.**

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

20/03/2019

**ಪ್ರತಿ:**

1. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಂಬಳೀಪುರ ಗ್ರಾಮಪಂಚಾಯಿತಿ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು. } ಇವರಿಗೆ ವಿನ್ಯಾಸದ ನಾಲ್ಕು ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

2. ನಿರ್ದೇಶಕರು, ಶ್ರೀ ಆರ್. ಮಂಜುನಾಥ್ ಬಿನ್ ರಾಮಕೃಷ್ಣಪ್ಪ ಮತ್ತು ಶ್ರೀ ಪ್ರಸನ್ನಮೂರ್ತಿ ಬಿನ್ ಬಿ.ಟಿ. ಕೃಷ್ಣಚಾರ್, ಮೆ॥ ಹಿತೈಷಿ ಪ್ರಾಪರ್ಟೀಸ್ ಪ್ರೈ ಲಿ., ಕೇರಾಫ್ ಐ.ಎಫ್.ಬಿ. ಆಟೋಮೋಟಿವ್ ಪ್ರೈ ಲಿ., # 16, 1ನೇ ಮುಖ್ಯ ರಸ್ತೆ, ಮಹದೇವಪುರ, ಬೆಂಗಳೂರು–560 048 ಇವರಿಗೆ ಮಾಹಿತಿಗಾಗಿ ಹಾಗೂ ಸ್ಥಳದಲ್ಲಿ ಅಭಿವೃದ್ಧಿ ಪಡಿಸುವ ಸಂಬಂಧ ಮಾತ್ರ ಒಂದು ನಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.